ಉ) ಎಸ್ ಡಿ ಎಂ ರಚನೆ ವಿಳಂಬದ ಕಾರಣ ಹಾಗೂ

ಜಿಲ್ಲಾ ಪಂಚಾಯತ್ ಅವರಿಂದ ಎಸ್ ಡಿ ಎಂ ಸಿಗೆ ಕೆಲಸ ಕೊಡಬಾರದೆಂದು ತಿಳಿಸಿದ್ದರ ಮೇರೆಗೆ ಸಿವಿಲ್ ಕಾಮಗಾರಿಗಳು ಮಂದಗತಿಯಿಂದ ಸಾಗಿವೆ

ಊ) 1) ಈ ಕಾಮಗಾರಿಗಳನ್ನು ನಿಗಧಿತ ಅವಧಿಯಲ್ಲಿ ಪೂರ್ಣ ಗೊಳಿಸಲು ಎಸ್ ಡಿ ಎಂ ಸಿ ಯವರ ಸಭೆ ನಡೆಸಲಾಗಿದ್ದು ನಿಖರವಾದ ಸಮಯದಲ್ಲಿ ಮುಗಿಸಲು ತಿಳಿಸಲಾಗಿದೆ

2) ಎಲ್ಲಾ ಮುಖ್ಯ ಅಧ್ಯಾಪಕರಿಗೆ ಸಮಯಾನುಸಾರ ಮುಗಿಸಲು ತಾಕಿತು ಮಾಡಲಾಗಿದೆ

48 (104) ಶ್ರೀ ಪಾಟೀಲ್ ಡಿ ಆರ್ (ಗದಗ್) ಮಾನ್ಯ ಪ್ರಾಧಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಪ್ರಾಧಮಿಕ ಮತ್ತು ಪ್ರೌಢ ಶಿಕ್ಷಣ ಕಲಿಯುವ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಮೌಲ್ಯ ಶಿಕ್ಷಣ ಒದಗಿಸಲು ಈಗಿರುವುದಕ್ಕಿಂತ ಉತ್ತಮ ವ್ಯವಸ್ಥೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ,

ಆ) ಈಗಿನ ಆರ್ಥಿಕ ಬೆಳವಣಿಗೆಯ ಕಾಲದಲ್ಲಿ ಜನಜೀವನ ಸರಿದಾರಿಯ ಮೇಲೆ ಇರಲು ಮೌಲ್ಯ ಶಿಕ್ಷಣ ಅವಶ್ಯಕತೆ ಬಹಳ ಅಗತ್ಯವಾಗಿರುವುದು ಸರ್ಕಾರಕ್ಕೆ ಮನದಟ್ಟಾಗಿದೆಯೇ,

ಇ) ಇದಕ್ಕಾಗಿ ಸರ್ಕಾರ ಯೋಚಿಸಿರುವ ಕ್ರಮಗಳಾವುವು ,

ಈ) ಈ ಸುವರ್ಣ ಕರ್ನಾಟಕದ ಆಚರಣೆಯ ಸಂದರ್ಭದಲ್ಲಿ ಇದನ್ನು ಮುಂದಿನ ಶೈಕ್ಷಣಿಕ ವರ್ಷದಿಂದ ಅನುಷ್ಠಾನಗೊಳಿಸಲಾಗುವುದೇ ,

ಉ) ಇದಕ್ಕಾಗಿ ಬೇಕಾಗುವ ಅನುಕೂಲತೆಗಳೇನು ,

ಊ) ಸರ್ಕಾರ ಯಾವ ಯಾವ ಅನುಕೂಲತೆ ಒದಗಿಸುವುದು ?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಧಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) 1986ರ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಉಲ್ಲೇಖಿಸಿರುವ 10 ಕೋರ್ ಎಲಿಮೆಂಟ್ಸ್ ಮತ್ತು 84 ಕೋರ್ ವ್ಯಾಲ್ಯೂಗಳನ್ನು (Human Values) ಆಧಾರವಾಗಿಟ್ಟುಕೊಂಡು ಪ್ರಸ್ತುತ ಪರ್ಯವಸ್ತು ಮತ್ತು

ಪರ್ಯಪುಸ್ತಕಗಳನ್ನು ರಚಿಸಿದೆ 1 ರಿಂದ 10 ನೇ ತರಗತಿಯವರೆಗಿನ ಎಲ್ಲಾ ಭಾಷಾ ಮಾಧ್ಯಮಗಳ ಪರ್ಯಪುಸ್ತಕಗಳಲ್ಲಿ ಮೌಲ್ಯಗಳನ್ನು ಅಳವಡಿಸಿದೆ

ಆ) ಹೌದು

ಇ) ಪ್ರಸ್ತುತ ಶಾಲಾ ಪರ್ಯಕ್ರಮದಲ್ಲಿ ವಾರಕ್ಕೆ ಒಂದು ಅವಧಿಯನ್ನು ಮೌಲ್ಯ ಶಿಕ್ಷಣಕ್ಕಾಗಿ ಮೀಸಲಿರಿಸಿದ್ದು, ಈ ಅವಧಿಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲಾಗುತ್ತಿದೆ

ಈ) ಹೌದು

ಉ) ಮತ್ತು ಊ) ಮೌಲ್ಯ ಶಿಕ್ಷಣವನ್ನು ಮಕ್ಕಳಿಗೆ ಪರಿಣಾಮಕಾರಿಯಾಗಿ ಬೋಧಿಸಲು ಶಿಕ್ಷಕರನ್ನು ಮೈಸೂರಿನಲ್ಲಿರುವ ರಾಮಕೃಷ್ಣ ಆಶ್ರಮದ ನೈತಿಕ ಮತ್ತು ಆಧ್ಯಾತ್ಮಕ ಸಂಸ್ಥೆಗೆ, ಯಲ್ಲಾಪುರದಲ್ಲಿರುವ ಯೋಗ ಶಿಕ್ಷಣ ಸಂಸ್ಥೆಗೆ ಮತ್ತು ಜಿಗಣಿಯಲ್ಲಿರುವ ಯೋಗ ಶಿಕ್ಷಣ ಸಂಸ್ಥೆಗಳಿಗೆ ಶಿಕ್ಷಕರನ್ನು ನಿಯೋಜಿಸಿ ತರಬೇತಿ ನೀಡಲಾಗುತ್ತಿದೆ

ಶಿಕ್ಷಕರಿಗೆ ಡಿ ಎಸ್ ಇ ಆರ್ ಟಿ, ಸಿ ಟಿ ಇ ಮತ್ತು ಡಯಟ್ ಗಳ ಮೂಲಕ ನೀಡುವ ತರಬೇತಿಗಳಲ್ಲಿ ಮೌಲ್ಯ ಶಿಕ್ಷಣಕ್ಕೆ ಒತ್ತು ನೀಡಲಾಗುತ್ತಿದೆ

50 (101) ಶ್ರೀಮತಿ ಶಕುಂತಲಾ ಟಿ ಶೆಟ್ಟಿ (ಪುತ್ತೂರು) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯದಲ್ಲಿ ಅಕ್ಷರ ದಾಸೋಹ ಯೋಜನೆಯಲ್ಲಿ ಎಷ್ಟು ಜನ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ (ಜಿಲ್ಲಾವಾರು ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ತಾಲ್ಲೂಕುವಾರು ವಿವರ ಒದಗಿಸುವುದು) ,

ಆ) ಈ ಸಿಬ್ಬಂದಿಗಳ ನೇಮಕಾತಿ ಪ್ರಕ್ರಿಯೆ ಹೇಗೆ, ಇವರುಗಳಿಗೆ ನೀಡುತ್ತಿರುವ ವೇತನ ಭತ್ಯೆ ಎಷ್ಟು (ವಿವರ ನೀಡುವುದು) ,

ಇ) ಈ ಸಿಬ್ಬಂದಿಗೆ ವೇತನ ಹೆಚ್ಚಳ ಮಾಡುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ,

ಈ) ಇದರಿಂದ ಸಿಬ್ಬಂದಿಗೆ ಕರ್ತವ್ಯ ನಿರ್ವಹಿಸಲು ತೊಂದರೆಯಾಗುತ್ತಿರುವುದು ನಿಜವೇ ,

ಉ) ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು ?